## 14

# ಸಭೆಯ ದೈವಿಕ ಅಂಕಿತಗಳು

ಹೊಸ ಒಡಂಬಡಿಕೆಯನ್ನು ಜಾಗರೂಕತೆಯಿಂದ ಓದಿದರೆ ಸಭೆಯು ಒಂದು ವಿಶೇಷವಾದ ಸಜೀವ ರಚನೆಯಾಗಿ ಸೃಷ್ಟಿಸಲ್ಪಟ್ಟಿತೆಂಬುದನ್ನು ಪ್ರಕಟಿಸುತ್ತದೆ. ಆದುದರಿಂದ ಅದು ಪ್ರೇರಿತ ಬರಹಗಾರರಿಂದ ವಿಶೇಷ ವಾದ ರೀತಿಗಳಲ್ಲಿ ಹೇಳಲ್ಪಟ್ಟಿದೆ. ಈ ಹೇಳಿಕೆಗಳನ್ನು ಮೂರು ಗುಂಪುಗಳಲ್ಲಿ ವಿಭಾಗಿಸಬಹುದು. ಅವು ವಿಶೇಷವಾದ ಅರ್ಥದೊಂದಿಗೆ, ಕಾರ್ಯವನ್ನು, ಒಡೆತನ ಹಾಗೂ ಸಂಬಂಧವನ್ನು ಪ್ರಕಟಿಸಲು ಉಪಯೋಗಿಸಲ್ಪಟ್ಟಿವೆ. ಅವು ದೈವಿಕ ನಿರ್ದೇಶನಗಳಿಂದ ಕೊಡಲ್ಪಟ್ಟಿವೆ ಮತ್ತು ದೈವಿಕ ಉದ್ದೇಶವನ್ನು ನೆರ ವೇರಿಸುತ್ತವೆ.

ಸಭೆಯನ್ನುದ್ದೇಶಿಸಿ ಪರಿಶುದ್ಧಾತ್ಮನಿಂದ ಉಪಯೋಗಿಸಿದ ಮಾತುಗಳನ್ನು ಕೇವಲ ಉದಾಹರಣೆಗಳೆಂದು ಯೋಚಿಸಬಾರದು.[1] ಹೊಸ ಒಡಂಬಡಿಕೆಯು ಕ್ರಿಸ್ತನ ನಂಬಿಗಸ್ತ ಹಿಂಬಾಲಕರನ್ನು, ಆತನ "ಸಭೆ," ಆತನ "ದೇಹ" ಹಾಗೂ ಆತನ "ರಾಜ್ಯ" ಎಂದು ಕರೆಯುತ್ತದೆ. ಈ ದೈವಿಕವಾದ ಅಂಕಿತಗಳು[2] ಕರ್ತನು ಸ್ಥಾಪಿಸಿದ ಸಭೆಯನ್ನು ಗುರುತಿಸುತ್ತವೆ, ಗುಣಲಕ್ಷಣಗಳನ್ನು ವಿವರಿಸುತ್ತವೆ ಹಾಗೂ ವರ್ಣಿಸುತ್ತವೆ. ಅವುಗಳನ್ನು ಜಾಗರೂಕತೆಯಿಂದ ಆಲೋಚಿಸಿ.

### ಕರ್ತವ್ಯದ ಅಂಕಿತಗಳು

ಹೊಸ ಒಡಂಬಡಿಕೆಯಲ್ಲಿ ಸಭೆಗೆ ಕೊಡಲ್ಪಟ್ಟ ಕೆಲವು ಅಂಕಿತಗಳು ಒಂದು ದೇಹದಂತೆ, ಜೀವಿಸುವಂತಾ ಸಭೆಯ ಕಾರ್ಯಕ್ಕೆ ಸಂಬಂಧಿಸಿರುತ್ತವೆ. ಈ ಅಂಕಿತಗಳು ಕರ್ತನ ಸಭೆಯು, ಉದ್ದೇಶದಲ್ಲಿ, ರಚನೆಯಲ್ಲಿ ಹಾಗೂ ಕೃತ್ಯದಲ್ಲಿ ಏನಾಗಿದೆ ಎಂಬುದನ್ನು ಪ್ರತ್ಯಕ್ಷಪಡಿಸುತ್ತವೆ.

ಕ್ರಿಸ್ತನು ಸ್ಥಾಪಿಸಿದ್ದನ್ನು ಸರಳವಾಗಿ "ಸಭೆ" ಎಂದು ಹೇಳಲಾಗಿದೆ (ಕೊಲೊಸ್ಸೆ 1:18, 24). ಈ ಮಾತಿನ ಅರ್ಥ "ಕರ್ತನ ಅನುಯಾಯಿಗಳಾದ ಜನರ ಒಂದು

ಕೂಟ" ಎಂದು. ಈ ಜನರು ಕೂಟವಾಗಿ ಕೂಡಿ ಬಂದ ಅರ್ಥದಲ್ಲಿ (1 ಕೊರಿಂಥ 11:18), ಸ್ಥಳಿಕ ಅರ್ಥದಲ್ಲಿ (1 ಕೊರಿಂಥ 1:2), ಕ್ಷೇತ್ರದ ಅರ್ಥದಲ್ಲಿ (1 ಕೊರಿಂಥ 16:1) ಹಾಗೂ ಸಾರ್ವತ್ರಿಕದ ಅರ್ಥದಲ್ಲಿ (ಎಫೆಸ 5:23) ಸಂಬಂಧಿಸಿ ಹೇಳಲ್ಪಟ್ಟಿದೆ. ಈ ಅಂಕಿತವು ಕ್ರಿಸ್ತನು ಸ್ಥಾಪಿಸಿದ್ದರ ಮೂಲ ಅರ್ಥವನ್ನು - ಆತನಿಗಾಗಿ ಜೀವಿಸುವ, ಆತನನ್ನು ಆರಾಧಿಸುವ, ಆತನ ಕಾರ್ಯಮಾಡುವ ಆತನ ರಕ್ತದಿಂದ ವಿಮೋಚಿಸಲ್ಪಟ್ಟ ಜನರ ಗುಂಪನ್ನು ಪ್ರಕಟಿಸುತ್ತದೆ.

ಸಭೆಯ ವೈಯಕ್ತಿಕ ಸದಸ್ಯರು " ಕ್ರೈಸ್ತರು" ಎಂದು ಕರೆಯಲ್ಪಟ್ಟಿದ್ದಾರೆ. ಯಾಕಂದರೆ ಅವರು ಕ್ರಿಸ್ತನಂತಾಗಲು ಪ್ರಯತ್ನಿಸುವವರು ( ಕ್ರೈಸ್ತನು ಎಂಬ ಪದದ ಅರ್ಥ "ಕ್ರಿಸ್ತನಂತೆ" ಇಲ್ಲವೇ "ಕ್ರಿಸ್ತನ ಅನುಯಾಯಿ" ಎಂದಾಗುತ್ತದೆ). ಕ್ರೈಸ್ತರು ಎಂಬ ಹೆಸರು ಶಿಷ್ಯರಿಗೆ ಮೊದಲು ಅಂತಿಯೋಕ್ಯದಲ್ಲಿ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 11:26). ಈ ಹೆಸರು ಕೊಡಲ್ಪಡುವದರ ಹಿನ್ನೆಲೆಗಳು ಸ್ಪಷ್ಟವಾಗಿಲ್ಲ, ಆದರೆ ದೇವರು ತನ್ನ ಜನಾಂಗಕ್ಕಾಗಿ ಆಯ್ದುಕೊಂಡನೆಂಬುದರ ಬಗ್ಗೆ ನಾವು ಖಚಿತತೆಯುಳ್ಳವರಾಗಿರಬಹುದು. ಒಂದು ಹೆಸರಾಗಿ ಅದು ಹೊಸ ಒಡಂಬಡಿಕೆಯಲ್ಲಿ ಮೂರು ಸಲ ಕಂಡುಬರುತ್ತದೆ (ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16).

ಬೈಬಲ್ ಸಭೆಯ ಸದಸ್ಯರನ್ನು "ಪರಿಶುದ್ಧರು," ಪವಿತ್ರಗೊಳಿಸಲ್ಪಟ್ಟ ಜನರು ಎಂದು ಕರೆಯಲ್ಪಟ್ಟಿದ್ದಾರೆ. ದೇವರಿಂದ ಆಯ್ಕೆಗೊಂಡವರಾಗಿ ಇವರು ಪ್ರತ್ಯೇಕಿಸಲ್ಪಟ್ಟ ಜನರಾಗಿದ್ದಾರೆ. "ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನು ಎಫೆಸಿದಲ್ಲಿರುವ ಪರಿಶುದ್ಧರಿಗೂ, ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟವರಿಗೂ ಬರೆಯುವುದು" (ಎಫೆಸ 1:1) ಎಂದು ಪೌಲನು ಎಫೆಸದವರನ್ನು ಸಂಬೋಧಿಸಿದ್ದಾನೆ. ಬೈಬಲಿನ ಕಿಂಗ್ ಜೇಮ್ಸ್ ಆವೃತ್ತಿಯ ತೀತ 2:14ರಲ್ಲಿ "ಸ್ವಕೀಯ ಜನರು" ಎಂದಿದೆ. ಈ ಪುಸ್ತಕದ ಕೊನೆಯಲ್ಲಿರುವ ಹೊಸ ಒಡಂಬಡಿಕೆಯು "ತನ್ನ ಸ್ವಾಸ್ತ್ಯವಾಗಿರುವ ಜನಾಂಗ" ಎಂದು ಹೇಳುತ್ತದೆ. "ಹೋಲಿ" ಇಲ್ಲವೇ "ಸೇಂಟ" ಇವುಗಳ ಮೂಲ ಅರ್ಥವು "ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವರು" ಎಂದಾಗುತ್ತದೆ. ದೇವರ ಸಭೆಯು "ದೇವರ ಸ್ವಂತ ಸ್ವಾಸ್ತ್ಯವಾಗಿರುವ ಜನಾಂಗ," ಪರಿಶುದ್ಧ ಜನಾಂಗ, ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟ ಜನಾಂಗ ಆಗಿದೆ. ಕ್ರೈಸ್ತರು ಪರಿಶುದ್ಧವಾದ ಕರೆಯಿಂದ ಕರೆಯಲ್ಪಡುತ್ತಾರೆ (2 ತಿಮೊಥೆ 1:9). ಅವರು ಪರಿಶುದ್ಧ ನಡವಳಿಕೆಯಲ್ಲಿಯೂ ಭಕ್ತಿಯಲ್ಲಿಯೂ ಜೀವಿಸ ಬೇಕು (2 ಪೇತ್ರ 3:11). ಆತನ ಮುಂದೆ ಅವರು ಅಂತ್ಯದಿನದಲ್ಲಿ "ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ" ಕಾಣಿಸಿಕೊಳ್ಳಲು ಹುಡುಕುತ್ತಾರೆ (ಕೊಲೊಸ್ಸೆ 1:22ಬಿ).

ಬೈಬಲಿನ ಕೆಲವು ಭಾಷಾಂತರಗಳಲ್ಲಿ ಮತ್ತಾಯ, ಮಾರ್ಕ, ಲೂಕ ಹಾಗೂ

ಯೋಹಾನ ಸುವಾರ್ತೆಗಳ ಶೀರ್ಷಿಕೆಗಳಲ್ಲಿ “ಸೇಂಟ” ಎಂದಿರುವುದು. ಹಾಗೂ ಪ್ರಕಟನೆಯ ಪುಸ್ತಕಕ್ಕೆ “ದೈವಿಕನಾದ ಸೇಂಟ ಯೋಹಾನನ ಪ್ರಕಟನೆ” ಎಂಬ ಹೆಸರು ಹೊಂದಿದೆ. ಹೊಸ ಒಡಂಬಡಿಕೆಯ ಈ ಪುಸ್ತಕಗಳ ಶೀರ್ಷಿಕೆಗಳು ಮನುಷ್ಯನಿಂದ ಬಂದಿವೆ ಆದರೆ ದೇವರಿಂದ ಅಲ್ಲ. ಕ್ರಿಸ್ತನಲ್ಲಿರುವ ವ್ಯಕ್ತಿಯನ್ನು “ಪರಿಶುದ್ಧರು” ಎಂದು ಹೊಸ ಒಡಂಬಡಿಕೆಯು ಕರೆಯುತ್ತಿದೆ. ಸಭೆಯು “ಪರಿಶುದ್ಧರ ಸಭೆಗಳು” (1 ಕೊರಿಂಥ 14:33) ಎಂದೂ ಹೇಳಲ್ಪಟ್ಟಿದೆ. ಜನರು ಕ್ರೈಸ್ತರಾಗುವಾಗ ದೇವರಿಗಾಗಿ ಪ್ರತ್ಯೇಕಿಸಲ್ಪಡುತ್ತಾರೆ.

ಇದಲ್ಲದೇ, ಸಭೆಯು ಕ್ರಿಸ್ತನ “ದೇಹ” ಎಂದು ಹೇಳಲ್ಪಟ್ಟಿದೆ (ಎಫೆಸ 1:22, 23). ಈ ಮಾತು ಕೆಲವು ಸಲ ಕಾರ್ಯಾಚರಣೆಯಲ್ಲಿ ಸಭೆಯು ಏನಾಗಿದೆಯೆಂಬುದನ್ನು ಉದಾಹರಿಸಲು ಉಪಯೋಗಿಸಲ್ಪಟ್ಟಿದೆ (1 ಕೊರಿಂಥ 12:12-27) ಹಾಗೂ ಕೆಲವು ಸಲ ಸಭೆಯು ನಿಜವಾಗಿಯೂ ಏನಾಗಿದೆ ಎಂಬುದನ್ನು ಗುರುತಿಸಿ ತೋರಿಸುತ್ತದೆ. ಅಂಕಿತವಾಗಿ ಉಪಯೋಗಿಸಲ್ಪಡು ವಾಗ, “ಕ್ರಿಸ್ತನ ದೇಹ” ಎಂಬ ಮಾತುಗಳು ಕಾರ್ಯವನ್ನು ಹಾಗೆಯೇ ಸಭೆಯ ಸಂಬಂಧವನ್ನು ಒತ್ತಿ ಹೇಳುತ್ತದೆ. ಸಭೆಯು ಭೂಲೋಕದಲ್ಲಿ ಕ್ರಿಸ್ತನ ಆತ್ಮಿಕ ದೇಹವಾಗಿದೆ ಹಾಗೂ ದೇಹವು ತನ್ನ ತಲೆಗೆ ಸಂಬಂಧಿಸಿದಂತೆ ಅದು ಕ್ರಿಸ್ತನಿಗೆ ಸಂಬಂಧಿಸಿದೆ. ಕ್ರಿಸ್ತನ ಈ ಆತ್ಮಿಕ ದೇಹದಲ್ಲಿ ವೈಯಕ್ತಿಕ ಕ್ರೈಸ್ತರು ದೇಹದ “ಅಂಗಗಳಂತೆ” ಪ್ರತಿಯೊಬ್ಬ ಕ್ರೈಸ್ತನು ಅದರ ಸದಸ್ಯನಾಗಿ ಮತ್ತು ದೇವರ ಅಂಗವಾಗಿ ಕಾರ್ಯಮಾಡುತ್ತ ವರ್ತಿಸುವುದು ಎಂದು ಹೇಳಲಾಗಿದೆ. “ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ” (1 ಕೊರಿಂಥ 12:27) ಎಂದು ಪೌಲನು ಕೊರಿಂಥದ ಸಭೆಗೆ ಬರೆದಿದ್ದಾನೆ.

ಸಭೆಯು “ದೇವರ ರಾಜ್ಯ” ಎಂದೂ ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:12). ಕೆಲವು ಸಲ “ಪರಲೋಕ ರಾಜ್ಯ” ಎಂಬುದಾಗಿಯೂ ಹೇಳಲ್ಪಟ್ಟಿದೆ (ಮತ್ತಾಯ 16:18, 19) ಮತ್ತು ಕೆಲವು ಸಲ ಅದು “ದೇವರ ರಾಜ್ಯ”ವಾಗಿದೆ (ಯೋಹಾನ 3:3). ಈ ಎರಡೂ ಪದ ಪ್ರಯೋಗಗಳು ಸಭೆಯ/ರಾಜ್ಯದ ಆಡಳಿತೆಯ ಹಾಗೂ ಆಳ್ವಿಕೆಯ ಆತ್ಮಿಕ ಸ್ವಭಾವವನ್ನು ಪ್ರತಿಬಿಂಬಿಸುತ್ತವೆ (ಯೋಹಾನ 18:36). ಸಭೆಯು ಭೂಲೋಕದಲ್ಲಿ ದೇವರ ಆಳ್ವಿಕೆಗೆ ಸಮರ್ಪಿಸಿಕೊಂಡ ಕ್ರಿಸ್ತನ ಅನುಯಾಯಿಗಳ ಗುಂಪಾಗಿರುತ್ತದೆ. ಕ್ರಿಸ್ತನು ಅರಸನಾಗಿದ್ದು ಈಗ ತನ್ನ ರಾಜ್ಯದ ಮೇಲೆ, ಸಭೆಯ ಮೇಲೆ ಆಳಿಕೆ ನಡಿಸುತ್ತಿರುವನು (1 ಕೊರಿಂಥ 15:24, 25). ಇದರ ಪರಿಣಾಮವಾಗಿ ಸಭೆಗೆ ದೈವಿಕ ಶಿರಸ್ಸು ಇಲ್ಲವೇ ಅರಸನು ಇರುವನು ಹಾಗೂ ಅದು ದೈವಿಕ ಅಧಿಕಾರದಿಂದ ನಡಿಸಲ್ಪಡುತ್ತಿರುವುದು. ಸಭೆಯ ಸದಸ್ಯರು ಅರಸ ಯೇಸುವಿನ ಅಧಿಕಾರಕ್ಕೆ ತಲೆಬಾಗಿ, ಅವರು ಭೂಲೋಕದಲ್ಲಿ ವಾಸಿಸುತ್ತಿದ್ದರೂ ಆತನ ಆತ್ಮಿಕ

ರಾಜ್ಯದ "ಪೌರರಾಗಿ" ಜೀವಿ ಸುತ್ತಿರುವರು (ಫಿಲಿಪ್ಪಿ 3:20).

ದೇವರ ರಾಜ್ಯದ ಭಾಗವಾಗಿರುವರು ಹಾಗೆಯೇ ಪರಲೋಕ ರಾಜ್ಯದ "ಪೌರರು" ಎಂದು ವಿವರಿಸಲ್ಪಡುತ್ತಾರೆ (ಮತ್ತಾಯ 16:18, 19). "ನಾವಾದರೋ ಪರಲೋಕ ನಿವಾಸಿಗಳು, ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ" (ಫಿಲಿಪ್ಪಿ 3:20) ಎಂದು ಪೌಲನು ಹೇಳುತ್ತಾನೆ. "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ಪರಿಶುದ್ಧರೊಂದಿಗೆ ಒಂದೇ ಪೌರತ್ವದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು" (ಎಫೆಸ 2:19, 20) ಎಂದೂ ಅವನು ಬರೆದಿದ್ದಾನೆ. ಕ್ರಿಸ್ತನು ನಮ್ಮ ಅರಸನು (1 ಕೊರಿಂಥ 15:24, 25), ಮತ್ತು ಕ್ರಿಸ್ತನ ಆಡಳಿತದಲ್ಲಿ ಜೀವಿಸುವವರು ಮಾತ್ರವೇ ಆತನ ರಾಜ್ಯದಲ್ಲಿರುವರು (ಮತ್ತಾಯ 7:21).

ಕ್ರೈಸ್ತರು ಹಳೇ ಒಡಬಡಿಕೆಯಲ್ಲಿ ದಾನಿಯೇಲನು ಹೇಳಿದ ನಿತ್ಯರಾಜ್ಯದ ಪೌರರಾಗಿದ್ದಾರೆ (ದಾನಿಯೇಲ 2:44). ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಅದನ್ನು "ಕದಲಿಸಲಾರದ" ರಾಜ್ಯ ಎಂದು ವಿವರಿಸಿದ್ದಾನೆ: "ಆದಕಾರಣ ಯಾರೂ ಕದಲಿಸಲಾರದ" ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು, ..." (ಇಬ್ರಿಯ 12:28). ಇಂದಿನಿಂದ ಒಂದು ಸಾವಿರ ವರ್ಷಗಳ ನಂತರ ನೀವು ಎಲ್ಲಿರುವಿರಿ ಎಂದು ಮುಂದಿನ ಸಲ ನೀವು ಕೇಳಿಕೊಳ್ಳುವಾಗ, ನೀವು ಕ್ರೈಸ್ತರಾಗಿದ್ದರೆ, "ನಾನು ನಿತ್ಯವಾದ ರಾಜ್ಯದಲ್ಲಿ ಇರುವೆನು!" ಎಂದು ನಿಮಗೆ ನೀವೇ ಹೇಳಬಹುದು. ದೇವರ ರಾಜ್ಯವು ಇಂದು ಇದ್ದು ನಾಳೆ ಹೊರಟು ಹೋಗುವಂತದ್ದಲ್ಲ - ಅದು ನಿತ್ಯವಾದದ್ದಾಗಿದೆ.

## ಒಡೆತನದ ಅಂಕಿತಗಳು

ಹೊಸ ಒಡಂಬಡಿಕೆಯಲ್ಲಿ ಸಭೆಗೆ ಸಂಬಂಧಿಸಿದ ಮೂರು ವಿಧಾನಗಳು ಸಭೆಯು ದೇವರಿಗೆ ಹಾಗೂ ಕ್ರಿಸ್ತನಿಗೆ ಒಳಪಟ್ಟ ಸಂಬಂಧವನ್ನು ಒತ್ತಿ ಹೇಳುತ್ತವೆ. ಈ ಮಾತುಗಳು ಒಡೆತನವನ್ನೂ ನಾಯಕತ್ವವನ್ನೂ ಸೂಚಿಸುತ್ತವೆ.

ಮೊದಲನೆಯದಾಗಿ, ಸಭೆಯು "ಕ್ರಿಸ್ತನ ಸಭೆ" ಎಂದು ಹೇಳಲ್ಪಟ್ಟಿದೆ. ಪೌಲನು ರೋಮಾಪುರದವರಿಗೆ ಬರೆದ ಪತ್ರದ ಮುಕ್ತಾಯದಲ್ಲಿ ಅಖಾಯದ ಸಭೆಗಳಿಗೆ ಅವನು ವಂದನೆಗಳನ್ನು ಕಳುಹಿಸುತ್ತಾ; "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾಪುರ 16:16ಬಿ). ಈ ಅಂಕಿತವು ಸಭೆಯ ಒಡೆತನವನ್ನು ನಿಕಟ ಸಂಬಂಧವನ್ನು ಒತ್ತಿ ಹೇಳುತ್ತದೆ. ಸಭೆಯು ಕ್ರಿಸ್ತನ ಸಭೆಯಾಗಿದೆ

ಯಾಕಂದರೆ ಕ್ರಿಸ್ತನು ಅದನ್ನು ಸ್ಥಾಪಿಸಿದ್ದಾನೆ. ಅದನ್ನು ಕೊಂಡು ಕೊಂಡಿದ್ದಾನೆ, ಅದರ ಶಿರಸ್ಸಾಗಿ ಸೇವೆ ಮಾಡುತ್ತಾನೆ. ಒಮ್ಮೆ ಒಬ್ಬನು ಕ್ರಿಸ್ತನಿಗಾಗಿ ಮಾರ್ಪಟ್ಟರೆ ಅವನು ಕ್ರಿಸ್ತನಿಗೆ ಒಳಪಟ್ಟವನಾಗುತ್ತಾನೆ (1 ಕೊರಿಂಥ 6:20). ಅವನು ಕ್ರೈಸ್ತನು, ಕ್ರಿಸ್ತನ ಅನುಯಾಯಿ ಎಂದು  ಕರೆಯಲ್ಪಡುವಂತೆ ಕ್ರಿಸ್ತನೊಂದಿಗೆ ಸಂಪೂರ್ಣವಾಗಿ ಗುರುತಿಸಲ್ಪಡುವವನಾಗುತ್ತಾನೆ (ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16). ಆಗ ಕ್ರಿಸ್ತನ ಅನುಯಾಯಿಗಳ ವಿಶೇಷ ಕೂಟವು ಸಭೆಯು ಯಾರಾಗಿದ್ದರು, ಯಾರ ಒಡೆತನದಲ್ಲಿ ಇರುವುದು ಮತ್ತು ಅದರ ಭಾಗ ಯಾರು ಎಂಬುದನ್ನು ತೋರಿಸಲು ಸಭೆ ಎಂದು ಕರೆಯಲ್ಪಟ್ಟಿದೆ.

ಎರಡನೆಯದು, ಸಭೆಯು "ದೇವರ ಸಭೆ" ಎಂದು ಸಂಬಂಧಿಸಿ ಹೇಳಲ್ಪಟ್ಟಿದೆ (1 ಕೊರಿಂಥ 1:2). ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಸಭೆ ಎಂದು ಹೇಳಲ್ಪಟ್ಟಿದೆ. ನಾವು ಅದನ್ನು ದೇವರ ಸಭೆಗೆ ಸಂಬಂಧಿಸಿ ಹೇಳುವದನ್ನು ನಿರೀಕ್ಷಿಸುತ್ತೇವೆ ಯಾಕಂದರೆ ಯೇಸುವು ತಾನು ಮತ್ತು ತನ್ನ ತಂದೆ ಒಂದೇ ಎಂದು ಹೇಳುತ್ತಾನೆ (ಯೋಹಾನ 10:30). ಜಗದುತ್ಪತ್ತಿಗೆ ಮೊದಲೇ ದೇವರು ಸಭೆಯನ್ನು ಯೋಜಿಸಿದನು (ಎಫೆಸ 3:10, 11). ಸಭೆಗಾಗಿ ಸಿದ್ಧತೆ ಮಾಡಲು (ಮತ್ತಾಯ 16:18) ಹಾಗೂ ಅದನ್ನು ತನ್ನ ರಕ್ತದಿಂದ ಕೊಳ್ಳಲು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 20:28). ಲೋಕವನ್ನು ತನ್ನೊಂದಿಗೆ ಸಂಧಾನ ಪಡಿಸಿಕೊಳ್ಳಲು ಶಿಲುಬೆಯಲ್ಲಿ ಕ್ರಿಸ್ತನಲ್ಲಿ ದೇವರು ಇದ್ದ ಹಾಗೆಯೇ (2 ಕೊರಿಂಥ 5:19) ದೇವರು ಸಭೆಯನ್ನು ಸ್ಥಾಪಿಸುವದರಲ್ಲಿಯೂ, ಕೊಂಡುಕೊಳ್ಳುವದರಲ್ಲಿಯೂ ಕ್ರಿಸ್ತನೊಂದಿಗೆ ಇದ್ದನು.

ಮೂರನೆಯದು, ಸಭೆಯ ಸದಸ್ಯರು "ದಾಸರು" ಇಲ್ಲವೇ "ಸೇವಕರು" ಎಂದು ವಿವರಿಸಲ್ಪಟ್ಟಿದ್ದಾರೆ. ಕ್ರಿಸ್ತನಿಗೆ ಸಮರ್ಪಿಸಲ್ಪಡುವವರು ಆತನಿಗೆ ವಿಧೇಯರಾಗುವವರು ಆತನ ಸೇವಕರಾಗಿದ್ದಾರೆ. ಹೊಸ ಒಡಂಬಡಿಕೆಯು ಬರೆಯಲ್ಪಟ್ಟಾಗ, ಗುಲಾಮ/ಯಜಮಾನ ಸಂಬಂಧವು ರೋಮ್ ಸ್ರಾಮಾಜ್ಯದ ಭಾಗವಾಗಿತ್ತು, ದಾಸನು ಸಂಪೂರ್ಣವಾಗಿ ತನ್ನ ಯಜಮಾನನ ನಿಯಂತ್ರಣದಲ್ಲಿ ಇದ್ದನು. ಅವನಿಗೆ ನಿಜವಾದ ಯಾವುದೇ ಹಕ್ಕೂ, ನಿಜವಾದ ಸೊತ್ತೂ ಇರಲಿಲ್ಲ. ಅವನು ತನಗೇ ಸ್ವಂತದವನಾಗಿರಲಿಲ್ಲ. ಈ ಮಾತು ಹಾಗೂ ಈ ಸಂದರ್ಭವು ಕ್ರಿಸ್ತನಿಗೆ ನಮ್ಮನ್ನು ಸಮರ್ಪಿಸುವ ಮತ್ತು ಆತನ ವಾಕ್ಯದ ಅಡಿಯಲ್ಲಿ ನಮ್ಮ ಜೀವಿತವನ್ನು ಉದಾಹರಿಸುವದಕ್ಕೆ ಉಪಯೋಗಿಸಲ್ಪಟ್ಟದ್ದರಲ್ಲಿ ಆಶ್ಚರ್ಯವಿಲ್ಲ. "ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ, ನಾನು ಕ್ರಿಸ್ತನ ದಾಸನಲ್ಲ" (ಗಲಾತ್ಯ 1:10ಬಿ; ಫಿಲಿಪ್ಪಿ 1:1 ನೋಡಿರಿ) ಎಂದು ಪೌಲನು ಬರೆದನು. "ನಾವು ವಿತರ್ಕಗಳನ್ನೂ ದೇವಜ್ಞಾನವನ್ನೂ ವಿರೋಧಿಸುವದಕ್ಕೆ ಎಲಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನೂ

ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆಹಿಡಿದು ... ಸಿದ್ಧರಾಗಿದ್ದೇವೆ" (2 ಕೊರಿಂಥ 10:5) ಎಂದೂ ಅವನು ಬರೆದನು.

ಕ್ರೈಸ್ತರು - ಕ್ರಿಸ್ತನನ್ನು ತಮ್ಮ ಯಜಮಾನನೆಂದು ಹೇಳಿಕೊಳ್ಳುವವರು - ತಮ್ಮ ಜೀವನಗಳ ಮೇಲೆ ಇನ್ನು ಮುಂದೆ ಯಜಮಾನನಾಗಿರಲಾರರು. ಅವರು ತಮ್ಮ ಸ್ವಂತ ಚಿತ್ತವನ್ನು "ಶಿಲುಬೆಗೆ" ಹಾಕತಕ್ಕದ್ದು. ಅಂದರೆ, ಅವರು ತಮ್ಮ ಪಾಪಭರಿತ ಮಾನವ ಅಪೇಕ್ಷೆಗಳನ್ನು ನಾಶಪಡಿಸತಕ್ಕದ್ದು ಮತ್ತು ಜೀವನದಲ್ಲಿ ದೇವರ ಆಜ್ಞೆಗಳನ್ನು ಮೊದಲಾಗಿ ಇಡತಕ್ಕದ್ದು. "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವುದು ಬೇಡವೇ ಬೇಡ. ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತನು" (ಗಲಾತ್ಯ 6:14) ಎಂದು ಪೌಲನು ಹೇಳಿದನು. "ಇನ್ನು ಮೇಲೆ ಯಾರೂ ನನ್ನನ್ನು ತೊಂದರೆ ಪಡಿಸಬಾರದು, ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ" (ಗಲಾತ್ಯ 6:17) ಎಂದೂ ಅವನು ಹೇಳಿದ್ದಾನೆ.

## ಸಂಬಂಧದ ಅಂಕಿತಗಳು

ಸಭೆಗೆ ಸಂಬಂಧಿಸಿ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ವಿಧಾನಗಳು ಸಂಬಂಧದ ವಿಚಾರವನ್ನು ಒತ್ತಿ ಹೇಳುತ್ತವೆ. ಕರ್ತನ ಸಭೆಯ ಸದಸ್ಯರಾಗಿರುವುದು ವಿವಿಧ ಸಂಬಂಧಗಳನ್ನು ಒಳಗೊಂಡಿರುವದರಿಂದ ಇದು ನಿರೀಕ್ಷಿಸಲ್ಪಟ್ಟಿದೆ.

ಗುಲಾಮ/ಯಜಮಾನ ಸಂಬಂಧವಲ್ಲದೇ ಈಗಾಗಲೇ ಹೇಳಿದ ದೇಹ/ಶಿರಸ್ಸು ಸಂಬಂಧದೊಂದಿಗೆ " ಕ್ರೈಸ್ತ" ಎಂಬ ಪದವು ತಮ್ಮ ಕರ್ತನೊಂದಿಗೆ ಸಭಾ ಸದಸ್ಯರೊಂದಿಗಿರುವ ಸುಂದರವಾದ ಸಂಬಂಧವನ್ನು ಪ್ರಕಟಿಸುತ್ತದೆ. ಅವರು ಆತನ ಅನುಯಾಯಿಗಳು; ಅವರು ಆತನಿಗಾಗಿ ಜೀವಿಸುವರು ಮತ್ತು ಆತನ ಹೆಸರನ್ನು ಧರಿಸುವರು. ಅಪೊಸ್ತಲರಾದ ಪೌಲನು ಕ್ರೈಸ್ತನಾದ ತರುವಾಯ ತನ್ನ ಧಾರ್ಮಿಕ ಜೀವನವನ್ನು ಈಗ ಪ್ರಸಿದ್ಧವಾಗಿರುವ ಮಾತುಗಳೊಂದಿಗೆ ವಿವರಿಸಿದ್ದಾನೆ: "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ" (ಫಿಲಿಪ್ಪಿ 1:21). ಪೌಲನ ಜೀವನದಲ್ಲಿ ಕೇವಲ ಮೊದಲಿಗನು ಮಾತ್ರವಲ್ಲ - ಕ್ರಿಸ್ತನು ಅವರ ಜೀವವಾಗಿದ್ದನು! ಪೌಲನ ಜೀವನದ ಒಟ್ಟು ತಾತ್ಪರ್ಯ ಕ್ರಿಸ್ತನಾಗಿದ್ದನು. ಅವನು ನಿಜವಾಗಿಯೂ ಕ್ರೈಸ್ತನಾಗಿದ್ದನು.

ಹೊಸ ಒಡಂಬಡಿಕೆಯು ಸಭೆಯನ್ನು "ದೇವರ ಕುಟುಂಬ" ಎಂದು ವಿವರಿಸುತ್ತದೆ. ಕ್ರೈಸ್ತರು "ದೇವರ ಮನೆಯವರು" ಆಗಿರುವರೆಂದು ಪೌಲನು

ಹೇಳಿದನು (ಎಫೆಸ 2:19). "ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ" (1 ತಿಮೊಥೆ 3:15) ಹೇಗೆ ನಡೆದುಕೊಳ್ಳಬೇಕೆಂದು ತಿಳಿಯುವದಕ್ಕಾಗಿ ತಿಮೊಥೆಯನಿಗೆ ಬರೆದೆನೆಂದು ಅವನು ಹೇಳಿದನು. ಒಬ್ಬನು ಕ್ರಿಸ್ತನಿಗಾಗಿ ಮಾರ್ಪಾಟು ಹೊಂದುವ ಸಮಯದಲ್ಲಿ, ದೇವರು ಅವನನ್ನು ತನ್ನ ಮಗುವಿನಂತೆ ದತ್ತು ತೆಗೆದುಕೊಳ್ಳುತ್ತಾನೆ. ಅವನಿಗೆ ಕುಟುಂಬದ ಹಕ್ಕುಗಳನ್ನು ಕೊಡುತ್ತಾನೆ ಹಾಗೂ ಅವನನ್ನು ಕ್ರಿಸ್ತನೊಂದಿಗೆ ನಿತ್ಯಜೀವದ ಬಾಧ್ಯನನ್ನಾಗಿ ಮಾಡುತ್ತಾನೆ (ರೋಮಾಪುರ 8:15-17; ಎಫೆಸ 1:5). ಪ್ರಾರ್ಥಿಸಲು ಕ್ರೈಸ್ತರಿಗೆ ಪರಲೋಕದ ತಂದೆಯಿರುವನು. ಪ್ರಾರ್ಥಿಸುವದಕ್ಕಾಗಿ ಪ್ರೀತಿಯ ರಕ್ಷಕನು - ಹಿರಿಯ ಸಹೋದರನು, ಯೇಸುವು - ಇರುವನು. ಸಹೋದರ, ಸಹೋದರಿಯರಂತೆ ಅವರು ಒಬ್ಬರನ್ನೊಬ್ಬರು ಪ್ರೀತಿಸುವರು. ಸಹಾಯ ಮಾಡುವರು ಹಾಗೂ ಪ್ರೋತ್ಸಾಹಿಸುವರು (ಅಪೊಸ್ತಲರ ಕೃತ್ಯಗಳು 2:44).

ಸಭೆಯ ಸದಸ್ಯರು "ದೇವರ ಮಕ್ಕಳು" ಎಂದು ಸಂಬಂಧಿಸಿ ಹೇಳಲ್ಪಟ್ಟಿದ್ದಾರೆ. ದೇವರೊಂದಿಗೆ ಅವರಿಗೆ ವಿಶೇಷ ಸಂಬಂಧವಿರುವುದು; ಆತನು ಅವರ ತಂದೆ ಹಾಗೂ ಅವರು ಆತನ ಮಕ್ಕಳು. ವಿಶ್ವಾಸಿಗಳು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವಾಗ, ಅವರು ದೇವರ "ಮಕ್ಕಳಂತೆ" ದತ್ತು ಸ್ವೀಕಾರ ಹೊಂದುವರು (ಎಫೆಸ 1:5) ಆತನ ಮಕ್ಕಳಂತೆ, ಕ್ರೈಸ್ತರಿಗೆ ನಿತ್ಯವಾದ ಬಾಧ್ಯಸ್ಥಿಕೆಯಿರುವುದು (ಎಫೆಸ 1:11) ಹಾಗೂ ದೇವರ ಭೂಲೋಕದ ಕುಟುಂಬದ ಬಲವೂ ಸಹಕಾರವೂ ಇರುವುದು (1 ತಿಮೊಥೆ 3:15; ಎಫೆಸ 2:19-22). ಈ ಆತ್ಮಿಕ, ಪರಲೋಕದ ಕುಟುಂಬದಲ್ಲಿ ದೇವರು ತಂದೆಯಾಗಿರುವನು (ಮತ್ತಾಯ 6:9). ಯೇಸುವು ಹಿರಿಯ ಸಹೋದರನಾಗಿರುವನು (ರೋಮಾಪುರ 8:17). ಎಲ್ಲಾ ಕ್ರೈಸ್ತರು ಸಹೋದರರೂ ಸಹೋದರಿಯರೂ ಆಗಿರುವರು (2 ಪೇತ್ರ 3:15; 1 ಯೋಹಾನ 2:8-11).

ತನ್ನ ಮಕ್ಕಳಿಗಾಗಿ ದೇವರಿಗೆ ವಿಶೇಷ ಪ್ರೀತಿಯಿರುವುದು (1 ಯೋಹಾನ 3:1). ಆತನು ಅವರನ್ನು ಸೈತಾನನಿಂದ ಕಾಪಾಡುವನು ಮತ್ತು ಅವರ ಅನುದಿನದ ಅಗತ್ಯತೆಗಳನ್ನು ಪೂರೈಸುವನು, ಭೂಲೋಕದ ತಂದೆಯು ತನ್ನ ಮಕ್ಕಳಿಗೆ ಒಳ್ಳೆಯ ವರಗಳನ್ನು ಕೊಡುವಂತೆ ಸರ್ವಶಕ್ತನಾದ ದೇವರ - ಪರಲೋಕದ ಪರಿಪೂರ್ಣ ತಂದೆಯ ಮಕ್ಕಳು - ಕೇಳುವಾಗ ಇನ್ನೂ ಎಷ್ಟೋ ಹೆಚ್ಚು ಸುಂದರವಾದ ವರಗಳನ್ನು ನಿರೀಕ್ಷಿಸ ಬಹುದಲ್ಲವೇ! (ಮತ್ತಾಯ 7:11 ನೋಡಿರಿ).

ಆದಿ ಸಭೆಯ ಸದಸ್ಯರು ಒಬ್ಬರನ್ನೊಬ್ಬರು ಸಹೋದರರು ಎಂದು ಅಷ್ಟೇ ಅಲ್ಲ ಆದರೆ ಸುಂದರವಾದ ಸ್ನೇಹದಲ್ಲಿ ಒಂದಾಗಿ ನಿಲ್ಲುವ ಸ್ನೇಹಿತರೆಂದೂ ಯೋಚಿಸಿದರು (2 ಪೇತ್ರ 3:15; 3 ಯೋಹಾನ 15). ಕ್ರೈಸ್ತರು ಅತೀ ಉನ್ನತವಾದ ರೀತಿಯ ಸ್ನೇಹಿತರಾಗಿದ್ದಾರೆ.

“ನಿಮಗೆ ಶಾಂತಿಯಿರಲಿ, ಸ್ನೇಹಿತರು ನಿಮಗೆ ವಂದನೆ ಹೇಳುತ್ತಾರೆ. ಸ್ನೇಹಿತರನ್ನು ಹೆಸರ್ಹೆಸರಾಗಿ ವಂದಿಸು” (3 ಯೋಹಾನ 14) ಎಂದು ಬರೆಯುವದರಿಂದ ಯೋಹಾನನು ತನ್ನ ಮೂರನೆಯ ಪತ್ರಿಕೆಯನ್ನು ಮುಕ್ತಾಯಗೊಳಿಸಿದನು. ತನ್ನ ಸುತ್ತಲಿರುವ ಕ್ರೈಸ್ತರನ್ನು “ಸ್ನೇಹಿತರು” ಎಂದು ಕರೆದನು. ಪತ್ರವನ್ನು ಸ್ವೀಕರಿಸಲಿಕ್ಕಿದ್ದ ಕ್ರೈಸ್ತರನ್ನು “ಸ್ನೇಹಿತರು” ಎಂದು ಕರೆದನು. ಯೇಸುವು ತನ್ನ ಶಿಷ್ಯರನ್ನು “ಸ್ನೇಹಿತರು” ಎಂದು ಕರೆದನು. ಯೋಹಾನನು ಯೇಸುವಿನ ಮಾದಿರಿಯಂತೆ ಈ ಪದವನ್ನು ಉಪಯೋಗಿಸಿದನು ಎಂಬದರಲ್ಲಿ ಸಂಶಯವಿಲ್ಲ. ಯೇಸುವು ತನ್ನ ಶಿಷ್ಯರಿಗೆ ಹೀಗೆ ಹೇಳಿದನು,

> ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ. ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು. ಇನ್ನು ಮೇಲೆ ನಾನು ನಿಮ್ಮನ್ನು ಆಳು ಗಳನ್ನುವದಿಲ್ಲ; ಯಜಮಾನನು ಮಾಡುವಂಥದು ಆಳಿಗೆ ತಿಳಿಯುವದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನೆಲ್ಲಾ ನಿಮಗೆ ತಿಳಿಸಿದ್ದೇನೆ (ಯೋಹಾನ 15:13-15).

“ಉಳಿದ ಪ್ರತಿಯೊಬ್ಬರೂ ಬಿಟ್ಟು ಹೋಗುವಾಗ ನಿನ್ನೊಂದಿಗೆ ಉಳಿಯುವವನೇ ಸ್ನೇಹಿತನು” ಎಂದು ಯಾರೋ ಹೇಳಿದ್ದಾರೆ. ಯೇಸು ಈ ರೀ ತಿಯ ಸ್ನೇಹಿತನಾಗಿದ್ದಾನೆ. ನಮಗೆ ಯಾರೂ ಸಹಾಯ ಮಾಡಲಾರದೇ ಇದ್ದಾಗ, ಆತನು ನಮಗಾಗಿ ತನ್ನ ಪ್ರಾಣಕೊಟ್ಟನು. ಕ್ರೈಸ್ತರು ಒಬ್ಬರಿಗೊಬ್ಬರು ಈ ರೀತಿಯ ಸ್ನೇಹಿತರಾಗಿರತಕ್ಕದ್ದು (1 ಯೋಹಾನ 3:16). ಕ್ರೈಸ್ತರು “ಸ್ನೇಹಿತರು” ಆಗಿದ್ದಾರೆ.

ಮೊದಲನೆಯ ಶತಮಾನದ ಸಭೆಯು ಬಹಳ ಸಲ “ಕರ್ತನ ಶಿಷ್ಯರು” (ಅಪೊಸ್ತಲರ ಕೃತ್ಯಗಳು 9:1) ಇಲ್ಲವೇ ಸರಳವಾಗಿ “ಶಿಷ್ಯರು” (ಅಪೊಸ್ತಲರ ಕೃತ್ಯಗಳು 9:26; 11:26) ಎಂದು ಸಂಬಂಧಿಸಿ ಕರೆಯಲ್ಪಟ್ಟಿದೆ. “ಶಿಷ್ಯ” ಎಂಬ ಪದದ ಅರ್ಥ ಕಲಿಯುವ ಅಥವಾ ಹಿಂಬಾಲಕ ಎಂದಾಗುತ್ತದೆ. ಇದು ಕ್ರೈಸ್ತನ ಮತ್ತು ಅವನ ಕರ್ತನ ಮಧ್ಯದಲ್ಲಿ ಸತತವಾಗಿ ಅಸ್ತಿತ್ವದಲ್ಲಿರುವ ಸಂಬಂಧವನ್ನು ಸೂಚಿಸುತ್ತದೆ. ಶಿಷ್ಯನು ತನಗಿಂತ ದೊಡ್ಡವನಾದವನಿಗೆ ಒಪ್ಪಿಸಿಕೊಟ್ಟವನು. ದೊಡ್ಡವನಾದವನಿಗೆ ಒಪ್ಪಿಸಿಕೊಟ್ಟವನು ದೊಡ್ಡವನಾದವನಿಂದ ಕಲಿತುಕೊಳ್ಳು ವವನು. ಬೋಧನೆ, ಅನುಕರಣೆಯ ಮುಖಾಂತರ ಸತತವಾಗಿ ಕಲಿಯಲು ಹುಡುಕುವವನು ಆಗಿದ್ದಾನೆ. ಅವನು ಕೇವಲ ಕೇಳುವವನಲ್ಲ; ಅವನು ಕಲಿಯುವವನಾಗಿದ್ದಾನೆ. ಅವನ ಕರ್ತನು ಅವನ ಯಜಮಾನನಾಗಿದ್ದಾನೆ, ಅವನು ಬೋಧಕನಾಗಿದ್ದಾನೆ (ಯೋಹಾನ 13:13).

"ಶಿಷ್ಯ" ಎಂಬ ಪದವು ಸುವಾರ್ತೆಗಳಲ್ಲಿ ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ. ಅವುಗಳಲ್ಲಿ 238 ಸಲ ಕಂಡು ಬರುತ್ತದೆ. ಅದು ಅಪೊಸ್ತಲರ ಕೃತ್ಯಗಳಲ್ಲಿ ಇಪ್ಪತ್ತೆಂಟು ಸಲ ಕಂಡು ಬರುತ್ತದೆ. ಪತ್ರಿಕೆಗಳಲ್ಲಿ, ಪ್ರಕಟನೆ ಗ್ರಂಥದಲ್ಲಿ ಕಂಡು ಬರುವದಿಲ್ಲ. ಸುವಾರ್ತೆಗಳಿಂದ, ಅಪೊಸ್ತಲರ ಕೃತ್ಯಕ್ಕೆ, ಪತ್ರಿಕೆಗಳಿಗೆ ಹೋಗುವಾಗ ಪದ ಪ್ರಯೋಗದಲ್ಲಿ ಸ್ಪಷ್ಟವಾದ ಬದಲಾವಣೆಯಾಗುವದಕ್ಕೆ ಕಾರಣವು ಭೂಲೋಕದಲ್ಲಿಯ ಕ್ರಿಸ್ತನ ಜೀವನದ ಸಮಯದಲ್ಲಿ ಆತನಿಗೆ ಸಂಬಂಧಿಸಿ ಆತನ ಅನುಯಾಯಿಗಳು "ಶಿಷ್ಯರು" ಎಂದು ಕರೆಯಲ್ಪಟ್ಟಿದ್ದು, ಅನಂತರ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ, ಪತ್ರಿಕೆಗಳಲ್ಲಿ ಮತ್ತು ಪ್ರಕಟನೆಯಲ್ಲಿ ಅವರು ಅವರ ಪವಿತ್ರ ಕರೆಯುವಿಕೆಯ ಸಂಬಂಧದಲ್ಲಿ "ಪರಿಶುದ್ಧರು" ಎಂದೂ ಅಥವಾ ಅವರ ಒಬ್ಬರಿಗೊಬ್ಬರ ಸಂಬಂಧದಲ್ಲಿ "ಸಹೋದರರು" ಎಂದು ಕರೆಯಲ್ಪಟ್ಟರು.

ತನ್ನ ದಿವಾರೋಹಣಕ್ಕಿಂತ ಮೊದಲು ತನ್ನ ಅಪೊಸ್ತಲರಿಗೆ ಮಹಾನಿಯೋಗದಲ್ಲಿ ಕ್ರಿಸ್ತನು ಹೀಗೆ ಆಜ್ಞಾಪಿಸಿದನು: "ಆದ್ದರಿಂದ ನೀವು ಹೊರಟುಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿರಿ. ನೋಡಿರಿ. ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:19, 20). ಈ ರೀತಿಯಲ್ಲಿ, ಹೊಸ ಒಡಂಬಡಿಕೆಯ ಅನಂತರದ ಭಾಗದಲ್ಲಿ ಈ ಪದವು ಕಂಡು ಬಾರದಿದ್ದರೂ, "ಶಿಷ್ಯ" ಎಂಬ ಪದಕ್ಕೆ ಸತತವಾದ ಉಪಯೋಗವನ್ನು ಆತನು ಕೊಟ್ಟನು.

ಶಿಷ್ಯನು ವಾಕ್ಯದ ಕಾರ್ಯವನ್ನು ಮಾಡುವವನಾಗಿದ್ದಾನೆ. "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋಬ 1:22) ಎಂದು ಯಾಕೋಬನು ಹೇಳಿದ್ದಾನೆ. ಶಿಷ್ಯನು ವಿದ್ಯಾರ್ಥಿಗಳಿಗಿಂತ ಹೆಚ್ಚಿನವನಾಗಿದ್ದಾನೆ; ಅವನು ಕ್ರಿಸ್ತನನ್ನು ಅನುಕರಣೆ ಮಾಡುವವನಾಗಿದ್ದಾನೆ. ಕ್ರಿಸ್ತನ ಅನುಯಾಯಿ ಆಗಿದ್ದಾನೆ.

ಇನ್ನೊಂದು ದೃಷ್ಟಿಕೋನದಿಂದ ಹೊಸ ಒಡಂಬಡಿಕೆಯ ಸಭೆಯು "ದೇವರ ಆಲಯ" ಎಂದು ಕರೆಯಲ್ಪಟ್ಟಿದೆ. "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16) ಎಂದು ಕೊರಿಂಥದಲ್ಲಿಯ ಕ್ರೈಸ್ತರಿಗೆ ಪೌಲನು ಹೇಳಿದ್ದಾನೆ. ಸಭೆಯು ಕ್ರೈಸ್ತರ ಕೂಟವಾಗಿ ದೇವರಿಗಾಗಿ ವಾಸಿಸುವ ಸ್ಥಳವನ್ನು ರೂಪಿಸುತ್ತದೆ. ದೇವರ ಪವಿತ್ರ ಆಲಯವು ಇಂದು ಸಜೀವ ದೇಹ, ಸಭೆ ಆಗಿದೆ. ವೈಯಕ್ತಿಕ ಕ್ರೈಸ್ತರು ಹೀಗೆ "ಪರಿಶುದ್ಧರು" ಎಂದು ಕರೆಯಲ್ಪಟ್ಟಿದೆ ಯಾಕಂದರೆ ಅವರು ಪರಿಶುದ್ಧವಾದ ಕಾರ್ಯ ಮಾಡಲು ದೇವರಿಗಾಗಿ ವಾಸಸ್ಥಾನವನ್ನು

ಒದಗಿಸಿ ಕೊಡಲು ಸುವಾರ್ತೆಯಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ (1 ಕೊರಿಂಥ 1:2).

ಹೊಸ ಒಡಂಬಡಿಕೆಯ ಒಂದು ವಾಕ್ಯದಲ್ಲಿ ಸಭೆಯು "ಚೊಚ್ಚಲ ಮಕ್ಕಳ ಸಭೆ" ಎಂದು ಕರೆಯಲ್ಪಟ್ಟಿದೆ (ಇಬ್ರಿಯ 12:23). ಸಭೆಯು ಭವಿಷ್ಯದೊಂದಿಗೆ ಅದ್ವಿತೀಯವಾದ ಸಂಬಂಧವನ್ನು ಕಾಪಾಡಿಕೊಂಡು ಹೋಗುತ್ತದೆ. ಯಾಕಂದರೆ ಸಭೆಯ ಪ್ರತಿಯೊಬ್ಬ ಸದಸ್ಯನು "ಪರಲೋಕದಲ್ಲಿ ದಾಖಲೆ ಮಾಡಲ್ಪಟ್ಟವನಾಗಿದ್ದಾನೆ." ಕ್ರೈಸ್ತನಿಗಾಗಿ ಭವಿಷ್ಯವು ಭಯವನ್ನೂ ಹೆದರಿಕೆಯನ್ನೂ ಹೊಂದಿಕೊಂಡಿರುವದಿಲ್ಲ ಯಾಕಂದರೆ ಕ್ರಿಸ್ತನು ನಿತ್ಯವಾದ ನಿರೀಕ್ಷೆಯನ್ನು ಅವರಿಗೆ ಕೊಡುವನು. ಸಂಬಂಧಕ್ಕೆ ಸಂಬಂಧಿಸಿದ ರೀತಿಯ ಅಂಕಿತಗಳು ಸಭೆಯು ಏನಾಗಿದೆ ಎಂದು ಕೊಡಲ್ಪಟ್ಟ ಒಳನೋಟವು ಸಭೆಯು ಹೇಗೆ ಜೀವಿಸತಕ್ಕದ್ದು ಎಂದಾಗಿದೆ. ಅವು ಭೂಲೋಕದಲ್ಲಿ ಹೇಗೆ ಜೀವಿಸ ಬೇಕು ಮತ್ತು ಭವಿಷ್ಯದಲ್ಲಿ ದೇವರೊಂದಿಗೆ ರಕ್ಷಿಸಲ್ಪಟ್ಟವರು ಹೇಗೆ ಇರುವರು ಎಂಬುದನ್ನು ಕ್ರೈಸ್ತರಿಗೆ ಹೇಳುತ್ತವೆ.

## ಮುಕ್ತಾಯ

ಅಬ್ರಾಮ ಎಂಬ ಹೆಸರು ಮುಂದೆ ಸರಿಯಾಗಿ ಹೊಂದಿಕೆಯಾಗದ್ದರಿಂದ ದೇವರು ಅಬ್ರಾಮನ ಹೆಸರನ್ನು ಅಬ್ರಹಾಮ ಎಂದು ಬದಲಾಯಿಸಿದನು. ಅವನು ಅನೇಕ ಜನಾಂಗಗಳ ತಂದೆಯಾಗುವನೆಂದು ಅಬ್ರಾಮನಿಗೆ ಹೇಳ ಲ್ಪಟ್ಟಿತು (ಆದಿಕಾಂಡ 17:5). ಅಬ್ರಾಮ ಎಂದರೆ "ಉನ್ನತಿಗೆ ಏರಿಸಲ್ಪಟ್ಟ ತಂದೆ" ಎಂದರ್ಥ. ಅಬ್ರಾಮ ಎಂಬುದು ಅರ್ಥಗರ್ಭಿತವಾದ ಹೆಸರಾಗಿತ್ತು. ಆದರೆ ಅದು ಭವಿಷ್ಯದ ಅಬ್ರಾಮನು ಹೇಗಿರುವನೆಂಬುದನ್ನು ಪ್ರತಿನಿಧಿಸುವದಿಲ್ಲ. ಅಬ್ರಹಾಮ ಎಂಬ ಹೆಸರಿನ ಅರ್ಥ "ಸಮೂಹದ ತಂದೆ" ಎಂಬುದು. ಜನಾಂಗದ ತಂದೆಯಾಗಿರುವ ಮನುಷ್ಯನಿಗಾಗಿ ಸರಿಯಾದ ಹೆಸರಾಗಿದೆ. ಅಬ್ರಾಹಾಮನಿಗೆ ದೇವರು ಕೊಟ್ಟ ಅಂಕಿತವು ದೇವರಿಗೂ ಅಬ್ರಹಾಮನಿಗೂ ಅರ್ಥಗರ್ಭಿತವಾಗಿತ್ತು. ಹಾಗೆಯೇ ದೇವರು ಸಭೆಗೆ ಕೊಟ್ಟ ಅಂಕಿತದ ಅರ್ಥವು ದೇವರಿಗೆ ವಿಶೇಷವಾದ ದ್ದಾಗಿದೆ ಮತ್ತು ನಮಗೂ ಬಹಳ ಅರ್ಥಗರ್ಭಿತವುಳ್ಳದ್ದಾಗಿರಬೇಕು.

ಹೊಸ ಒಡಂಬಡಿಕೆಯ ಸಭೆಗೆ ಸಂಬಂಧಿಸಿ ಹೇಳುವ ಯೋಗ್ಯ ಮಾರ್ಗಗಳಿವೆ ಮತ್ತು ಅವುಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು. ಸಭೆಗೆ, ಬೈಬಲ್‌ಗೆ ಸಂಬಂಧಿಸದೇ ಇರುವಂಥ ಅಂಕಿತಗಳನ್ನು ಉಪಯೋಗಿ ಸುವದರಿಂದ ಸಭೆಯ ಗುರುತನ್ನು ಗಲಿಬಿಲಿಗೊಳಿಸುತ್ತದೆ. ಜನರ ಒಂದು ಗುಂಪು ಹೊಸ ಒಡಂಬಡಿಕೆಯ ಸಭೆಯಂತೆ ಇರಲು ಹುಡುಕಿದರೆ ಮತ್ತು ಹೊಸ

ಒಡಂಬಡಿಕೆಯ ಸಭೆಯೆಂದು ತಿಳಿಯಲ್ಪಡ ಬೇಕಾದರೆ, ಅವರು ಸಭೆಗಾಗಿ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಅಂಕಿತಗಳನ್ನು ಉಪಯೋಗಿಸತಕ್ಕದ್ದು. ಒಂದು ಸಭೆಯು ತನ್ನನ್ನು ಹೊಸ ಒಡಂಬಡಿಕೆಯ ಸಭೆಯೆಂದು ಕರೆದುಕೊಳ್ಳ ಬಹುದು. ಆದರೆ ಹೊಸ ಒಡಂಬಡಿಕೆಯ ಸಭೆಯಾಗಿರದೇ ಇರಬಹುದು. ಅದು ನಿಜವಾಗಿಯೂ ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ, ಅದು ತನ್ನನ್ನು ಯೋಗ್ಯವಾದ ಹೊಸ ಒಡಂಬಡಿಕೆಯ ಭಾಷೆಯೊಂದಿಗೆ ಸಂಬಂಧಿಸಿ ಪ್ರಸ್ತಾಪಿಸಿಕೊಳ್ಳಬೇಕು.

ಇಂದು ದೇವರ ಸಭೆಯಾಗಿರುವದಕ್ಕೆ ಒಪ್ಪಿಸಿ ಕೊಡಲ್ಪಟ್ಟಿದ್ದ ಸದಸ್ಯನು ತನಗೆ ಅಂಕಿತ ಇಟ್ಟುಕೊಳ್ಳುವದರಲ್ಲಿ ಮತ್ತು ವಿವರಿಸಿಕೊಳ್ಳುವದರಲ್ಲಿ ತೋರಿ ಸಲ್ಪಡತಕ್ಕದ್ದು. ದೇವರು ತನ್ನ ಸಭೆಗಾಗಿ ಉಪಯೋಗಿಸಿದ ಅಂಕಿತಗಳನ್ನು ಉಪಯೋಗಿಸುವುದು ತನ್ನ ಸಭೆಯು ಏನಾಗಿರಬೇಕು ಮತ್ತು ಏನು ಮಾಡಬೇಕು ಎಂದು ದೇವರು ಬಯಸುವದನ್ನು ತನ್ನ ಜೀವನದಲ್ಲಿ ರೂಢಿಸಲು ಪ್ರಯತ್ನಿಸುವ ಕ್ರೈಸ್ತರಿಗಾಗಿ ಪ್ರಾರಂಭದ ಸ್ಥಳವಾ ಗಿರುವುದು. ದೇವರು ಸಭೆಯನ್ನು ಕರೆದದ್ದನ್ನು ತಮಗೆ ಕರೆದುಕೊಳ್ಳುವಾಗ ಅವರು ತಮ್ಮನ್ನು ಸರಿಯಾದ ಮಾರ್ಗದಲ್ಲಿಟ್ಟು ಕೊಳ್ಳುವರು ಮತ್ತು ಅವರು ಏನಾಗಿರಬೇಕೆಂದು ಬಯಸುವರೋ ಅದಾಗುವದರ ಕಡೆಗೆ ಹೋಗುತ್ತಿರುವರು. (ಪುರವಣಿ 3ನ್ನು ನೋಡಿರಿ.)

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂಬ ಪದವು ಸಭೆಯೊಂದಿಗಿನ ಸಂಬಂಧದಲ್ಲಿ ಹೇಗೆ ಉಪಯೋಗಿಸಲ್ಪಟ್ಟಿದೆ?
2. ಪೌಲನು ಸಭೆಯನ್ನು "ಕ್ರಿಸ್ತನ ಸಭೆ" ಎಂದು ಯಾಕೆ ಹೇಳಿದ್ದಾನೆ? ಸಭೆಗಾಗಿ ಬೇರೆ ಯಾವ ಅಂಕಿತಗಳು ಒಡೆತನವನ್ನು ಸೂಚಿಸುತ್ತವೆ?
3. ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಸಭೆಗಾಗಿರುವ ಅಂಕಿತಗಳನ್ನು ನಾವು ಯಾಕೆ ಉಪಯೋಗಿಸಬೇಕು?
4. ಬೈಬಲು ಹೇಳುವಂತೆ ನಾವು ಸಭೆಗೆ ಸಂಬಂಧಿಸಿ ಹೇಳುವಾಗ ನಾವು ಏನನ್ನು ಸಾಧಿಸುತ್ತೇವೆ?
5. ಸಭೆಯು "ದೇವರ ಕುಟುಂಬ" ಎಂದು ಯಾಕೆ ಕರೆಯಲ್ಪಟ್ಟಿದೆ?
6. " ಕ್ರೈಸ್ತ" ಎಂಬ ಪದದ ಮೂಲ ಅರ್ಥ ಯಾವುದು? ಒಬ್ಬನು ಕ್ರೈಸ್ತನಂತೆ ಜೀವಿಸುವಾಗ ಅವನು ಹೇಗೆ ಜೀವಿಸುವನು?
7. ಫಿಲಿಪ್ಪಿ 1:21ರಲ್ಲಿ ಪೌಲನು ತನ್ನ ಜೀವಿತವನ್ನು ಕ್ರೈಸ್ತನಂತೆ ಹೇಗೆ ವಿವರಿಸಿದನು?

8. "ದೇವರ ಮಗುವಾಗಿರುವುದು" ಎಂಬುದರ ಅರ್ಥವೇನು? ದೇವರೊಂದಿಗಿನ ಗುಣಲಕ್ಷಣಗಳನ್ನು ಕೊಡಿರಿ.
9. ಹೊಸ ಒಡಂಬಡಿಕೆಯಲ್ಲಿ "ಶಿಷ್ಯ" ಎಂಬ ಪದ ಎಷ್ಟು ಸಲ ಕಂಡು ಬರುತ್ತದೆ?
10. ಶಿಷ್ಯನ ಗುಣಲಕ್ಷಣಗಳನ್ನು ಕೊಡಿರಿ.
11. "ಸೇಂಟ್" (ಪರಿಶುದ್ಧರು) ಎಂಬ ಪದದ ಮೂಲ ಅರ್ಥ ಕೊಡಿರಿ. ಒಬ್ಬ ವ್ಯಕ್ತಿಯು ಯಾವಾಗ "ಸೇಂಟ್" ಆಗುವನು? ಒಬ್ಬ ಸೇಂಟ್‌ನ ಗುಣಲಕ್ಷಣ ಗಳು ಯಾವವು?

ಟಿಪ್ಪಣಿಗಳು

[1]ಹೊಸ ಒಡಂಬಡಿಕೆಯಲ್ಲಿ ಸಭೆಯು ಉದಾಹರಿಸಲ್ಪಟ್ಟಿದೆ. ಉದಾಹರಣೆಯಾಗಿ - ಕುರಿಮಂದೆಯಂತೆ (ಯೋಹಾನ 10:1), ದ್ರಾಕ್ಷ ತೋಟದಂತೆ (ಮತ್ತಾಯ 20:1) ಅಥವಾ ಅಮೂಲ್ಯ ಮುತ್ತು (ಮತ್ತಾಯ 13:45, 46) ಅಂಥ ರೂಪಗಳು ಸಭೆಯನ್ನು ಹೆಚ್ಚು ಉತ್ತಮವಾಗಿ ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ಆದರೆ ಅವು ಕೇವಲ ಉದಾಹರಣೆಗಳು. [2]ಸಭೆಯನ್ನು ಗುರುತಿಸುವ ಮಾರ್ಗಗಳಲ್ಲಿ "ಅಂಕಿತಗಳು" ಎಂದು ಇಲ್ಲಿ ಉಪಯೋಗಿಸಿದಂತೆ, ಸಭೆಯನ್ನು ಕುರಿತು ಹೇಳುವ ಬೈಬಲಿನ ಮಾತುಗಳು ಎಂದರ್ಥದಲ್ಲಿವೆ.